## 3. ಅಧ್ಯಕ್ಷರ ಅಭಿಪ್ರಾಯ

**ವಿಷಯ : ರಾಜ್ಯಪಾಲರು ಭಾಷಣ ಮಾಡುವಾಗ ಶ್ರೀ ಮಾಧುಸ್ವಾಮಿಯವರು ಸಭಾಗೌರವವನ್ನು ಬಿಟ್ಟು ವರ್ತಿಸಿದ್ದಾರೆಂದು ಪತ್ರಿಕೆಗಳಲ್ಲಿ ಪ್ರಕಟವಾಗಿರುವ ಬಗ್ಗೆ.**

**ಅಧ್ಯಕ್ಷರು :** ಮಾಧ್ಯಮ ಮಿತ್ರರಲ್ಲಿ ನನ್ನ ಒಂದು ವಿನಂತಿ ಎಂದರೆ, ನಮ್ಮ ಕೆಲವು ಶಾಸಕ ಮಿತ್ರರು ನನ್ನ ಬಳಿ ಬಂದು ಇಲ್ಲಿ ಕೆಲವೆಲ್ಲಾ un parliamentary ಎಂದು ಕಿತ್ತು ಹಾಕಿರುತ್ತೀರಿ, ಆದರೂ ಸಹ ಅದನ್ನು ವರದಿ ಮಾಡಿರುತ್ತಾರೆ. ಆಮೇಲೆ ಕೆಲವೆಲ್ಲಾ ನಮಗೆ ನೋವುಂಟಾಗುವ ರೀತಿಯಲ್ಲೂ ವರದಿಗಳಾಗಿವೆ ಎನ್ನತಕ್ಕಂಥ ಮಾತುಗಳನ್ನು ನನ್ನಲ್ಲಿ ಬಂದು ಹೇಳಿದ್ದಾರೆ. ನಾನು ನಿಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಆದಷ್ಟು restraint ಆಗಿ ಇದ್ದು ವರದಿಗಳನ್ನು ಮಾಡಬೇಕು. ತಪ್ಪುಗಳಾಗಿದ್ದರೆ, ಮಾಡಲೇಬೇಕಾಗುತ್ತದೆ. Fourth Estate ವಿಚಾರದಲ್ಲಿ ನಾನು ಏನೂ ಹೆಚ್ಚು ಹೇಳುವುದಿಲ್ಲ. ಆದರೆ, ಏನು ನಮ್ಮ ಕೆಲವು ಸದಸ್ಯರು ಬಂದು ನನಗೆ ಹೇಳಿದ್ದಾರೆ, ಅದನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

**ಶ್ರೀ ಕೆ.ಆರ್. ರಮೇಶ್‌ಕುಮಾರ್ :** ನಾನು ತಮ್ಮಲ್ಲಿ appeal ಮಾಡಿಕೊಳ್ಳುತ್ತೇನೆ. ತಾವು ಹಾಗೆ chair ನಿಂದ ಹೇಳಲಿಕ್ಕೆ ಬರುವುದಿಲ್ಲ. Aggrieved members ಯಾರಾದರೂ ಇದ್ದರೆ, ಅವರು ಯಾವ ರೀತಿಯಲ್ಲಿ ಬೇಕಾದರೂ ಪರಿಹಾರ ಕಂಡುಕೊಳ್ಳುವುದಕ್ಕೆ ನಮ್ಮ ನಿಯಾಮಾವಳಿಗಳಲ್ಲಿ ಅವಕಾಶವಿದೆ.

**ಅಧ್ಯಕ್ಷರು:** ವಿನಂತಿ ಅಷ್ಟೆ. ಏನು ಭಾವನೆಗಳನ್ನು ಹೇಳಿದ್ದಾರೆ, ಅದನ್ನು ಹೇಳಿದೆ.

**SRI K.R. RAMESH KUMAR :** It is in good taste. ಹಾಗಾದರೆ, ನಮಗೆಲ್ಲ ನಿಗೂಢವಾಗಿದೆ. ಯಾವ ಪತ್ರಿಕೆ? ಯಾರ ಮೇಲೆ ಬರೆದಿದ್ದಾರೆ? ಏನು ಬರೆದಿದ್ದಾರೆ? ... we would like to know

**ಅಧ್ಯಕ್ಷರು :** ಆ details ಗೆ ಹೋಗುವುದಿಲ್ಲ. ಏನು ಹೇಳಿದ್ದಾರೆ. . . .

**ಶ್ರೀ ಕೆ.ಆರ್. ರಮೇಶ್‌ಕುಮಾರ್ :** ಆ ತರಹ ಗುಟ್ಟಾಗಿ ನಿಮ್ಮ ಹತ್ತಿರ ಬಂದ ಸದಸ್ಯರು ಯಾರು? ಅವರಿಗೇನು ನೋವಾಗಿದೆ? ಯಾವ ಪತ್ರಿಕೆಯಲ್ಲಿ ಬಂದಿದೆ? ಏನು ಬರೆದಿದ್ದಾರೆ? ಬರೆದಿದ್ದು ಸರಿಯೇ? ತಪ್ಪೆ? ಹೀಗಾದರೆ, ಇದು ಹೇಗೆ ಸಾಧ್ಯ ಸಾರ್? This is not correct Sir. Please. ಕೈಜೋಡಿಸಿ ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. You should not set wrong precedent. It is not right. They cannot come and stand here and say. ಯಾರಿಗೆ ಹೇಳುತ್ತಿದ್ದೀರಿ? ನಾವು ಯಾರು restraint ಮಾಡಿಕೊಳ್ಳಬೇಕು? ನಾವು ಏನು ಬರೆದಿದ್ದೇವೆಂದು? ಕೇಳುವುದಕ್ಕೆ ಅವರಿಗೆ ಅವಕಾಶವಿಲ್ಲ. ಯಾರು ನಿಮ್ಮ ಹತ್ತಿರ ಬಂದರೆಂಬುದು ನಮಗೆ ಗೊತ್ತಿಲ್ಲ. ನೀವು ಅವರಿಗೆ ಕಿವಿ ಮಾತು ಹೇಳಿದಿರೋ? ತಾಕೀತು ಮಾಡಿದಿರೋ? ಅದು

ಮುಗುಮ್ಮಾಗಿ ಇದ್ದುಬಿಡುತ್ತದೆ. ಪ್ರಕಾಶ್‌ರವರೆ, ನನ್ನ ಸಹಾಯಕ್ಕೆ ನೀವು ಬರಬೇಕು. I always bank on you for help. You sould tell whether I am right or wrong? I know you would always agree with me.

**ಶ್ರೀ ಎಂ.ಪಿ. ಪ್ರಕಾಶ್ (ಗೃಹ ಮತ್ತು ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು)** : ಅನೇಕ ಸಂದರ್ಭಗಳಲ್ಲಿ ಇಂಥ ವಿಚಾರಗಳನ್ನು ವರದಿ ಮಾಡಬೇಡಿ ಅಥವಾ ಇಂಥ ವಿಚಾರವನ್ನು ಅತಿರಂಜಿತವಾಗಿ ಬರೆಯಬೇಡಿ ಎಂದು ಹೇಳಿ ಅಧ್ಯಕ್ಷರುಗಳು ಪೀಠದ ಮೂಲಕ ಹೇಳಿದಂಥ ಉದಾಹರಣೆಗಳಿವೆ. ಆದರೆ, ಅವರನ್ನು ಅವರು defend ಮಾಡಿಕೊಳ್ಳಲಾಗುವುದಿಲ್ಲವೆನ್ನುವುದನ್ನು ಒಪ್ಪುತ್ತೇನೆ. ಒಂದು maxim ಇದೆ, a cantankerous press, a ubiquitous press, if they criticize, the men in authority have to tolerate ಅನ್ನತಕ್ಕಂಥ ಮಾತನ್ನು ಹೇಳುತ್ತಾರೆ. ಆದ್ದರಿಂದ, ನಾವೆಲ್ಲಾ ಅಧಿಕಾರದಲ್ಲಿರತಕ್ಕಂಥವರಿಗೆ. . . . .

**ಶ್ರೀ ಆರ್.ವಿ. ದೇಶಪಾಂಡೆ** : ರಾಜ್ಯಪಾಲರು ತಮ್ಮ ಸಂದೇಶದಲ್ಲಿ ಹೇಳಿದ್ದಾರೆ.

**ಶ್ರೀ ಎಂ.ಪಿ. ಪ್ರಕಾಶ್** : ಟೀಕೆ ಟಿಪ್ಪಣಿಗಳು ಬಂದರೆ ನಾವು ಅದನ್ನು ಸೈರಿಸಿಕೊಳ್ಳಬೇಕಾಗುತ್ತದೆ. ಏಕೆಂದರೆ, ಬಹಳ ಮುಖ್ಯವಾಗಿರತಕ್ಕಂಥ 4ನೇ ಅಂಗ ಆಗಿ ಅವರು ಕೆಲಸ ಮಾಡುತ್ತಾರೆ. ಅದರಿಂದ ನೋವಾಗಿದೆ ಎಂದರೆ ಅದಕ್ಕೊಂದು ಉತ್ತರ ಕೊಡಬಹುದೇ ವಿನ: ನಮ್ಮ ತಪ್ಪುಗಳೂ ಇರುತ್ತವೆ. ತಪ್ಪುಗಳನ್ನೂ ಬರೆದಿರುತ್ತಾರೆ. ಆದ್ದರಿಂದ, ನಾವು ಅದರ ಬಗ್ಗೆ ಹೆಚ್ಚು ತೀಕ್ಷ್ಣವಾಗಿರುವುದು ಬೇಡ.

**ಶ್ರೀ ಜೆ.ಸಿ. ಮಾಧುಸ್ವಾಮಿ** : ಅಧ್ಯಕ್ಷರೆ, ನಿಮ್ಮಲ್ಲಿ ಬಂದು ಕೇಳಿರುವವರಲ್ಲಿ ನಾನೂ ಒಬ್ಬ ಇದ್ದೇನೆ. ನನಗೆ ನೇರವಾಗಿ ಬರೆದಿದ್ದಾರೆ. 3 ದಿವಸಗಳಿಂದಲೂ ಒಂದೇ ಸಮನೆ ಬರೆಯುತ್ತಿದ್ದಾರೆ. ನಾನಿಲ್ಲೊಂದು privilege motion move ಮಾಡುವುದು ಬೇಡ, ಕೊನೆಯ ದಿವಸ ಎಂದು ಸುಮ್ಮನಿದ್ದೆ. ನಿನ್ನೆ ರಾಜ್ಯಪಾಲರು ಇಲ್ಲಿ ಭಾಷಣ ಮಾಡುವಾಗ ಮಾಧುಸ್ವಾಮಿಯರು ಸಭಾ ಗೌರವವನ್ನು ಬಿಟ್ಟು ವರ್ತಿಸಿದರೆಂದು ಬರೆದಿದ್ದಾರೆ. ನಾನು ಅಧ್ಯಕ್ಷರ ಹತ್ತಿರ ಹೋಗಿ, ನಾನು ಯಾವ ಸಭಾ ಗೌರವಕ್ಕೆ ಅವಮಾನವಾಗುವ ರೀತಿಯಲ್ಲಿ ಇಲ್ಲಿ ವರ್ತಿಸಿದ್ದೇನೆ, ತಾವೇನಾದರೂ ನನಗೆ ತಾಕೀತು ಮಾಡಿದ್ದೀರಾ ಎಂದು ಕೇಳಿದೆ.

**ಅಧ್ಯಕ್ಷರು:** ಮಾಧುಸ್ವಾಮಿಯವರೆ, ಅದನ್ನು ಲಂಭಿಸುವುದು ಬೇಡಿ.

**ಶ್ರೀ ಜೆ.ಸಿ. ಮಾಧುಸ್ವಾಮಿ** : ಈಗ ಅವರು aggrieved members ಎಂದು ಹೇಳಿದ್ದಾರಲ್ಲಾ. ಇಲ್ಲಿ I am the aggrieved person.

**ಅಧ್ಯಕ್ಷರು** : ಕೆಲವರು ಹೇಳಿದರು. ಅದನ್ನು ನಾನು ಸಂಕ್ಷಿಪ್ತವಾಗಿ ಮಾಧ್ಯಮದ ಮಿತ್ರರಿಗೆ ಅರಿಕೆ ಮಾಡಿದ್ದೇನೆ. ಲಂಭಿಸುವುದು ಬೇಡ.

**ಶ್ರೀ ಜೆ.ಸಿ. ಮಾಧುಸ್ವಾಮಿ** : ಇಲ್ಲ. ಇದು clear ಆಗಿ ಬಿಡಲಿ. ನೀವು. ನನಗೆ ಮಾತನಾಡಲು ಅವಕಾಶ ಕೊಡಬೇಕು. ನಾನು ಯಾವ ಹಂತದಲ್ಲಿ ರಾಜ್ಯಪಾಲರು ಇದ್ದಾಗ, ಯಾವ

ರೀತಿಯಾಗಿ ಅಸಭ್ಯ ವರ್ತನೆ ಇಲ್ಲಿ ಮಾಡಿದ್ದೇನೆ ಎಂಬುದನ್ನು ತಾವು ನನಗೆ ಹೇಳಬೇಕು, ಸೂಚನೆ ಕೊಡಬೇಕು ಎಂದೆ. ಇಲ್ಲ, ಇದನ್ನು ದೊಡ್ಡದು ಮಾಡುವುದು ಬೇಡ, ನಾನು ಅವರಿಗೆ ಒಂದು ಮಾತನ್ನು ಸೂಕ್ಷ್ಮವಾಗಿ ಹೇಳುತ್ತೇನೆಂದರು. ಅದಕ್ಕೆ ನಾನು ಸುಮ್ಮನೆ ಕುಳಿತಿದ್ದೇನೆ. I have gone with a notice to him. ಇದರಲ್ಲಿ ಏನೂ ಮುಚ್ಚುಮರೆ ಇಲ್ಲ. ನಾನು notice ಕೊಡುತ್ತಿದ್ದೇನೆ ಸಾರ್, paper ನಲ್ಲಿ ಈ ತರಹ ಮಾಧುಸ್ವಾಮಿ ಅಸಭ್ಯವಾಗಿ ವರ್ತಿಸಿದರು, ಸಭಾ ಗೌರವ ಬಿಟ್ಟು ವರ್ತಿಸಿದರು ಎಂದು ಬರೆಯುವ ಸ್ಥಿತಿಯಲ್ಲಿ ನಾನೇನು ವರ್ತಿಸಿದೆ ಎಂಬುದನ್ನು ಹೇಳಬೇಕು. ನೀವೇನಾದರೂ office ಗೆ ಹೇಳಿದ್ದೀರಾ ಅಥವಾ ಏನಾದರೂ Record ನಲ್ಲಿ ಹೋಗಿದೆಯೇ? Paper ನಲ್ಲಿ ಹೇಗೆ ಬರೆದಿರಿ ಎಂದು ನೀವು ಕೇಳಬೇಕು ಇಲ್ಲ notice ತೆಗೆದುಕೊಳ್ಳಿ ಎಂದು ನಾನು ಅವರಲ್ಲಿ ಕೇಳಿದೆ. ಮಾನ್ಯ ಅಧ್ಯಕ್ಷರು ಕೊನೆಯ ದಿವಸ ಇದಕ್ಕೋಸ್ಕರ ಕಾಲಹರಣ ಮಾಡುವುದು ಬೇಡ, ನಾನೇ ಸೂಚನೆ ಕೊಡುತ್ತೇನೆ ಎಂದಿದ್ದಕ್ಕೆ ನಾನು ಸುಮ್ಮನೆ ಕುಳಿತಿದ್ದೇನೆ ಇದರಲ್ಲಿ ಏನೂ ಗೌಪ್ಯ ಯಾರೂ ಮಾಡಲಿಲ್ಲ. ವಿಜಯ ಕರ್ನಾಟಕ paper ನವರೊಬ್ಬರೇ ಹಾಗೆ ಮೂರೂ ದಿವಸಗಳಿಂದ ಬರೆಯುತ್ತಿದ್ದಾರೆ. ಇದೂ ಒಂದು ನನಗೆ hurt ಆಗಿದೆ. ಇವರಿಗೆ, ಬರದ ಮೇಲೆ, ನೆರೆ ಹಾವಳಿ ಮೇಲೆ, ನಮಗೆ ಆಸಕ್ತಿ ಇರಲಿಲ್ಲ, ಬೇರೆ ಎಲ್ಲಾ ಮಾತನಾಡುತ್ತಿದ್ದರು, ಸುಮ್ಮನೆ ಕುಳಿತಿದ್ದರು ಎಂದು ಬರೆಯುತ್ತಾರೆ ಎಂದು ನಾನು ಅಧ್ಯಕ್ಷರನ್ನು ಕೇಳಿದೆ. ಉತ್ತರ ಕರ್ನಾಟಕದವರು ಮಾತನಾಡಲಿ ಎಂದು ಸುಮ್ಮನೆ ಕುಳಿತಿದ್ದು ಬಿಟ್ಟರೆ, ಅದರ ಬಗ್ಗೆ ಆಸಕ್ತಿ ಇಲ್ಲವೆಂದು ಯಾವಾಗಲಾದರೂ ಹೇಳಿದ್ದೇವೆಯೇ? ಇಲ್ಲಿ ಬಂದಿದ್ದೇವೆ, ಆ ಶಾಸಕರಿಗೇನಾದರೂ ಸಮಯಾವಕಾಶವಾಗಲಿ ಎಂದು ಕುಳಿತಿದ್ದೂ ಟೀಕೆಯಾಗುವುದಕ್ಕೆ ಶುರು ಮಾಡಿದರೆ, ನಾವು ಇಲ್ಲಿ ಕೆಲಸ ಮಾಡುವುದಕ್ಕೆ ಕಷ್ಟವಾಗುತ್ತದೆ. ಇದನ್ನು ಅವರ ಗಮನಕ್ಕೆ ತಂದು notice ಕೊಡುವುದಕ್ಕೆ ಹೋದಾಗ ಅದಕ್ಕೆ ಅವರು ಬೇಡಿ, ದೊಡ್ಡದು ಮಾಡಬೇಡಿ, ನಾನು ಸೂಚನೆ ಕೊಡುತ್ತೇನೆ ಎಂದು ಹೇಳಿದ ಮೇರೆಗೆ ನಾನು ಸುಮ್ಮನೆ ಕುಳಿತಿದ್ದೇನೆ, ಇದರಲ್ಲಿ ಅಧ್ಯಕ್ಷರೇನೂ ಮುಚ್ಚುಮರೆ, ಗುಟ್ಟು ಮಾಡುತ್ತಾರೆಂದು ನಾನು ಭಾವಿಸುವುದಿಲ್ಲ. ಅವರಿಗೆ ಗೌರವ ಕೊಟ್ಟು ನಾವು ಕುಳಿತಿದ್ದೇವೆ ಅಷ್ಟೇ.

**ಅಧ್ಯಕ್ಷರು** : ಆಯಿತು, ಅದನ್ನು ಲಂಭಿಸುವುದು ಬೇಡ. ಬಿಡಿ.

## (4) ನಿಯಮ 69ರ ಮೇರೆಗೆ

**ವಿಷಯ : ರಾಜ್ಯದ ಅನೇಕ ಜಿಲ್ಲೆಗಳಲ್ಲಿ ಅನಿರೀಕ್ಷಿತ ಪ್ರವಾಹದಿಂದ ಮತ್ತು ಸಕಾಲದಲ್ಲಿ ಮಳೆಯಾಗದೆ ಉಂಟಾಗಿರುವ ದುಷ್ಪರಿಣಾಮಗಳ ಬಗ್ಗೆ (ಮುಂದುವರಿದುದು)**

**ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ** : ಈಗಾಗಲೇ, ಈ ಸದನದಲ್ಲಿ ಅನೇಕ ಸದಸ್ಯರು ಬರಗಾಲದ ವಿಚಾರದ ಬಗ್ಗೆ ಹಾಗೂ ನಂಜುಂಡಪ್ಪ ವರದಿ ಬಗ್ಗೆ ಮತ್ತು ಈ ಭಾಗದ ಸಮಸ್ಯೆಗಳ ಬಗ್ಗೆ ಸಾಕಷ್ಟು ಬೆಳಕು ಚೆಲ್ಲಿದ್ದಾರೆ. ಅನೇಕ ಹೊಸ ಸದಸ್ಯರೂ ಕೂಡ ಬಹಳ ಪ್ರಭಾವಯುತವಾಗಿ